

**ವಾಸು** ಮತ್ತು ಕಾವ್ಯ, ತಮ್ಮ ತೋಟದಿಂದ ಮನೆಗೆ ಬರುತ್ತಿದ್ದರು. ಅವರ ಕೈಯಲ್ಲಿ ಅಣಬೆ ತುಂಬಿದ್ದ ಬುಟ್ಟಿಗಳಿದ್ದವು. ಮನೆಯ ದಾರಿಯಲ್ಲಿ ಅವರು ರೈಲ್ವೆ ಹಳಿಯನ್ನು ದಾಟಬೇಕಾಗಿತ್ತು. ರೈಲು ತುಂಬಾ ದೂರವಿದೆಯೆಂದು ಭಾವಿಸಿದ ಮಕ್ಕಳು ಹಳಿಯನ್ನು ದಾಟಲು ಹಳಿಗಳ ಮೇಲೆ ಹೆಜ್ಜೆಯಿಟ್ಟರು. ಆದರೆ, ಆ ಕ್ಷಣ ಅವರಿಗೆ ರೈಲೊಂದು ಹತ್ತಿರದಲ್ಲೇ ಬರುತ್ತಿರುವ ಸದ್ದು ಕೇಳಿಸಿತು. ಮಕ್ಕಳಿಬ್ಬರು ಗಾಬರಿಯಾದರು. ವಾಸು ಗಾಬರಿಯಲ್ಲಿ ತಂಗಿಯನ್ನು ಅಲ್ಲೇ ಬಿಟ್ಟು ಹಿಂದಕ್ಕೆ ಓಡಿಬಿಟ್ಟ! ಅದರಿಂದ ಇನ್ನಷ್ಟು ಗಾಬರಿಯಾದ ಕಾವ್ಯ ಹಳಿಯ ಮೇಲೆಯೇ ಓಡಲಾರಂಭಿಸಿದಳು.

'ಪಕ್ಕಕ್ಕೆ ನೆಗೆ, ಆಚೆ ಬಾ' ವಾಸು ಕೂಗುತ್ತಲೇ ಇದ್ದ.

ರೈಲು ತುಂಬಾ ಹತ್ತಿರದಲ್ಲಿ ಇದ್ದು, ಶಬ್ದ ಜೋರಾಗಿದ್ದರಿಂದ, ವಾಸುವಿನ ಸೂಚನೆ ಕಾವ್ಯಳಿಗೆ ಕೇಳಿಸಲೇ ಇಲ್ಲ.

ಓಡುತ್ತಲೇ ಇದ್ದ ಕಾವ್ಯ ಮುಗ್ಗರಿಸಿ ಹಳಿಗಳ ನಡುವೆಯೇ ಬಿದ್ದುಬಿಟ್ಟಳು. ಅವಳ ಕೈಯಲ್ಲಿದ್ದ ಅಣಬೆಯ ಬುಟ್ಟಿಯೂ ಜಾರಿ ಬಿದ್ದಿತು. ಬುಟ್ಟಿಯನ್ನು ತೆಗೆದುಕೊಳ್ಳಲು ಕಾವ್ಯ ಪ್ರಯತ್ನಿಸಿದಳು. ಆದರೆ, ರೈಲು ತುಂಬಾ ಹತ್ತಿರ ಬಂದುಬಿಟ್ಟಿತ್ತು. ಅದರ ಡ್ರೈವರ್ ತನ್ನ ಕೈಲಾದಷ್ಟು ಜೋರಾಗಿ ಸೀಟಿ ಊದಿದ.

ಕಥೆ 4

'ಅಣಬೆ ಅಲ್ಲೆ ಬಿಡು' ವಾಸು ಕೂಗುತ್ತಿದ್ದ. ಆದರೆ, ಕಾವ್ಯಳಿಗೆ, ಅಣ್ಣ ಅಣಬೆ ತೆಗೆದುಕೊಳ್ಳಲು ಹೇಳುತ್ತಿದ್ದಾನೆ ಎನ್ನಿಸಿ, ನೆಲದ ಮೇಲೆ ಮಲಗಿ, ಎರಡೂ ಕೈಗಳಲ್ಲಿ ಚೆಲ್ಲಿಹೋಗಿದ್ದ ಅಣಬೆಗಳನ್ನು ಒಗ್ಗೂಡಿಸಲಾರಂಭಿಸಿದಳು.

ಆ ಕ್ಷಣ ಡ್ರೈವರ್ ಗಾಡಿ ನಿಲ್ಲಿಸಲಾಗಲಿಲ್ಲ. ರೈಲು ಜೋರಾಗಿ ಶಿಳ್ಳೆ ಹೊಡೆಯುತ್ತಲೇ ಮಲಗಿದ್ದ ಕಾವ್ಯಳನ್ನು ದಾಟಿತು. ವಾಸು ಕಿರುಚುತ್ತಾ ಅಳಲಾರಂಭಿಸಿದ. ರೈಲಿನಲ್ಲಿದ್ದವರು, ಹೊರಗಿದ್ದವರು ಎಲ್ಲರೂ ಗಾಬರಿಯಿಂದ ನೋಡುತಿದ್ದರು. ರೈಲುಗಾಡಿಯ ಕಂಡಕ್ಟರ್, ಹುಡುಗಿಗೆ ಏನಾಯಿತೋ ಎಂದು ತಿಳಿದುಕೊಳ್ಳಲು ರೈಲಿನ ಹಿಂಬದಿಗೆ ಓಡಿದ.

ರೈಲು ಮುಂದೆ ಸಾಗಿದಾಗ, ಎಲ್ಲರೂ ನೋಡುತ್ತಿರುವಂತೆ, ಪುಟಾಣಿ ಕಾವ್ಯ ಇದ್ದಲ್ಲಿಯೇ ಮುಖ ಕೆಳಗೆ ಮಾಡಿ ನೆಲದ ಮೇಲೆ ಅಲುಗಾಡದೆ ಮಲಗಿಬಿಟ್ಟಿದ್ದಳು. ನಂತರ, ನಿಧಾನವಾಗಿ ತಲೆಯೆತ್ತಿದ್ದ ಕಾವ್ಯ, ಮಂಡಿಯೂರಿ ಮೇಲೆದ್ದು, ಚೆಲ್ಲಿದ್ದ ಅಣಬೆಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು, ತನ್ನ ಅಣ್ಣನ ಕಡೆ ಓಡಿದಳು!

●